## ಮೊಮ್ಮಗಳು ಜಾನಕಿ

‘ಊರ ಸೇರಬಹುದೇ ನೀನು, ದಾರಿ ಮುಗಿಯದೇ, ಹೊನ್ನು ದೊರೆಯಬಹುದೇ ಹೇಳು, ಮಣ್ಣ ಬಗೆಯದೇ...’ ಕಲರ್ಸ್ ಸೂಪರ್‌ನಲ್ಲಿ ‘ಮಗಳು ಜಾನಕಿ’ ಶೀರ್ಷಿಕೆ ಗೀತೆ ಆರಂಭವಾದಾಕ್ಷಣ ನನ್ನ ಒಂದೂಕಾಲು ವರ್ಷದ ಮೊಮ್ಮಗಳು ತನ್ನೆಲ್ಲ ವಿಧ್ವಂಸಕ ಕ್ರಿಯೆಗಳನ್ನು ತಟಸ್ಥಗೊಳಿಸಿ ಮಂತ್ರಮುಗ್ಧಳಂತೆ ಟೀವಿ ನೋಡಿ ಖುಷಿಪಡುತ್ತಾಳೆ.

–ಕೆ.ಶ್ರೀನಿವಾಸರಾವ್, ಹರಪನಹಳ್ಳಿ

## ಸಾರ್ಥಕ ಜಾಗೃತಿ

ಚಂದನದ ‘ಶುಭೋದಯ’ದಲ್ಲಿ ಹುಲಿಕಲ್ ನಟರಾಜ್ ನಡೆಸಿಕೊಟ್ಟ ಕಾರ್ಯಕ್ರಮ ಸಾರ್ಥಕ ಅನ್ನಿಸಿತು. ವಿದ್ಯಾವಂತರು, ಅವಿದ್ಯಾವಂತರಿಂದ ಹಿಡಿದು ಎಲ್ಲಾ ವರ್ಗದ ಜನರು ಈ ಮಾಟ ಮಂತ್ರ, ದೆವ್ವ, ಭೂತ, ಭಾನಾಮತಿಯಿಂದ ಮಾನಸಿಕ ಒತ್ತಡಕ್ಕೆ ಒಳಗಾಗಿ ನೆಮ್ಮದಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಇಲ್ಲವೆ ನಿಧಿಯ ದುರಾಸೆಗೆ ಮುಗ್ಧ, ಅಮಾಯಕ ಹಸುಳೆ ಬಲಿ ಕೊಡುವ ಅಮಾನವೀಯ ಕೃತ್ಯಗಳು ಆಗಾಗ ನಡೆಯುತ್ತಿವೆ. ಈ ಎಲ್ಲದಕ್ಕೂ ಮುಕ್ತಾಯ ಹಾಡಲು ಇಂತಹ ಪ್ರಯತ್ನ ಆದರಣೀಯ. ಸಮಾಜದ ಸ್ವಾಸ್ಥ್ಯಕ್ಕೆ ಇಂತಹ ಕಾರ್ಯಕ್ರಮಗಳು ಹೆಚ್ಚು ಪ್ರಸಾರವಾಗಲಿ.

–ಶಿವಮೊಗ್ಗ ರಮೇಶ್, ಮೈಸೂರು

ವಾರದ ಪತ್ರ

## ಕಾಮಿಡಿ ಕಿಲಾಡಿಗಳು

ಝೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಈ ಕಾರ್ಯಕ್ರಮದಲ್ಲಿ ಹಾಸ್ಯದ ತುಣುಕೂ ಇಲ್ಲ. ನಗು ತರಿಸುವ ಸಂದರ್ಭಗಳೂ ಇಲ್ಲ. ಕಲಾವಿದರ ನಟನೆಯಂತೂ ಶಾಲಾ ಮಕ್ಕಳ ಮಟ್ಟದಲ್ಲೇ ಇದೆ. ಕೆಲವು ಪಾತ್ರಗಳು, ಸಂಭಾಷಣೆಗಳು, ಸಂದರ್ಭಗಳು ಅತ್ಯಂತ ಕೀಳು ದರ್ಜೆಯಲ್ಲಿವೆ. ನಮ್ಮ ಸಾಹಿತಿಗಳಲ್ಲಿ ಅನೇಕರು ಅತ್ಯುತ್ತಮ ದರ್ಜೆಯ ಹಾಸ್ಯ ಬರಹಗಾರರಿದ್ದಾರೆ. ಅವರ ಲೇಖನಗಳು, ನಾಟಕಗಳು, ಸನ್ನಿವೇಶಗಳ ಸೃಷ್ಟಿ ಎಲ್ಲವನ್ನೂ ಸರಿಯಾಗಿ ಗಮನಿಸಿ, ಪ್ರಯತ್ನಪಟ್ಟರೆ, ಯುವ ಬರಹಗಾರರೂ ಉತ್ತಮ ಲೇಖಕರಾಗಬಹುದು. ಹಿರಿಯರಿಂದ, ನುರಿತವರಿಂದ ಕಲಿಯಬೇಕಾದಷ್ಟು ಅಂಶಗಳಿವೆ. ಅವೆಲ್ಲವನ್ನೂ ಆಸಕ್ತಿಯಿಂದ ಗಮನಿಸಿ, ಮನಸ್ಸಿನಲ್ಲಿ ಮೂಡುವ ಸ್ವಂತ ವಿಷಯವನ್ನು ಹಾಸ್ಯಭರಿತವಾಗುವಂತೆ ಪದಗಳಲ್ಲಿ ತರಬಹುದು. ಇದೇ ಕಲಿಕೆಯ, ಅಭ್ಯುದಯದ ವಿಧಾನ. ಇದರಲ್ಲಿ ಸಂಕೋಚ, ನಾಚಿಕೆಪಡಬೇಕಾದುದೇನೂ ಇಲ್ಲ. ಈಗಿರುವ ನಟರನ್ನು ಬದಲಾಯಿಸಿ, ಹೊಸಬರಿಗೆ ಅವಕಾಶಕೊಡಿ. ಅವರಾದರೂ ವೀಕ್ಷಕರಿಗೆ ಬದಲಾದ ಕಾರ್ಯಕ್ರಮ ಕೊಟ್ಟು ವೀಕ್ಷಕರನ್ನು ನಗಿಸುವರೇನೋ.

–ಶ್ರೀನಾಥ್ ಕೊನೇಟಿ, ಬೆಂಗಳೂರು

## ಅಹಿತ ಮಾತುಗಳೇಕೆ ಬೇಕು?

ರಿಯಾಲಿಟಿ ಶೋ ಹೇಗಿರಬಾರದು ಎಂಬುದಕ್ಕೆ ಕಲರ್ಸ್ ಸೂಪರ್‌ನ ‘ಸೂಪರ್ ದಂಪತಿ’ ಒಂದು ಉದಾಹರಣೆ. ಈ ಬಗ್ಗೆ ಕೆಲ ಓದುಗರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಸರ್ಕಸ್ ಜೋಕರ್ ರೀತಿಯ ವೇಷಭೂಷಣ ಹಿತ ಅನ್ನಿಸುವುದಿಲ್ಲ. ಈ ಮೊದಲು ಉದಯದಲ್ಲಿ ಶ್ರೀನಾಥ್ ನಡೆಸಿಕೊಡುತ್ತಿದ್ದ ‘ಆದರ್ಶ ದಂಪತಿ’ ಚೆನ್ನಾಗಿತ್ತು ಎಂದೆನಿಸುತ್ತದೆ.

–ಶಿಮೊಗೆ ರಮೇಶ್, ಮೈಸೂರು

## ಒಣಭೋದನೆ ಅಷ್ಟೇ!

‘ಹೆಲ್ಮೆಟ್ ರಹಿತ ವಾಹನ ಸಂಚಾರ ಕಾನೂನು ಬಾಹಿರ’ ಎನ್ನುವ ಸೂಚನೆಯನ್ನು ಟೀವಿಯಲ್ಲಿ ನೀಡುತ್ತಲೇ ಝೀ ಕನ್ನಡದ ‘ಗಟ್ಟಿಮೇಳ’ದಲ್ಲಿ ನಾಯಕನ ಸೋದರ ವಿಕ್ರಾಂತ್ ಹೆಲ್ಮೆಟ್ ಧರಿಸದೆ ಬೈಕ್ ಸವಾರಿ ಮಾಡುವ ದೃಶ್ಯ ಪ್ರಸಾರವಾಯಿತು. ಅಂತೆಯೇ ‘ನಮ್ಮ ವಾಹಿನಿ ಮೂಢನಂಬಿಕೆಗಳಿಗೆ ಪ್ರೋತ್ಸಾಹ ನೀಡುವುದಿಲ್ಲ’ ಎಂಬ ಸೂಚನೆಯೊಂದಿಗೆ ‘ಯಾರೇ ನೀ ಮೋಹಿನಿ’, ‘ಮಹಾದೇವಿ’, ‘ಪಾರು’, ‘ನಾಗಿಣಿ’, ‘ಉಘೇ ಉಘೇ ಮಾದೇಶ್ವರ’ ಧಾರಾವಾಹಿಗಳಲ್ಲಿ ಮಂತ್ರ, ತಂತ್ರ, ಅತಿಮಾನುಶ ಶಕ್ತಿಯ ವೈಭವೀಕರಣ ಮಾಡುತ್ತಾರೆ.

ಈ ರೀತಿಯ ಋಣಾತ್ಮಕ ಅಂಶಗಳಿಗೆ ಪ್ರೋತ್ಸಾಹ ನೀಡುವ ಬದಲು ಸಮಾಜ ಹಿತಕ್ಕೆ ಪೂರಕವಾಗುವ ಕಥೆಯನ್ನೇ ಧನಾತ್ಮಕ ನಿಟ್ಟಿನಲ್ಲಿ ತಿರುಗಿಸಿ ಸಮಕಾಲೀನ ಜನಜೀವನಕ್ಕೆ ಸ್ಪಂದಿಸುವಂತೆ ನಿರೂಪಿಸುವುದು ಸೂಕ್ತ.

–ರಮಣ್ ಶೆಟ್ಟಿ ರೆಂಜಾಳ್, ಮುಂಬೈ

## ನಿರಾಸೆ ಮೂಡಿಸುತ್ತಿರುವ ‘ಮಗಳು ಜಾನಕಿ’

ಸೀತಾರಾಂ ಅವರ ಧಾರಾವಾಹಿಗಳೆಂದರೆ ಮೂಲ ಕಥಾವಸ್ತು ಕೈ ಹಿಡಿತದಿಂದ ಜಾರದಂತೆ, ಅದನ್ನು ಯಶಸ್ವಿಯಾಗಿ ನಿರ್ವಹಿಸುವ ಜಾಣ್ಮೆಯುಳ್ಳವರೆಂದು ನನ್ನ ಅನಿಸಿಕೆಯಾಗಿತ್ತು. ಆದರೆ, ಪ್ರಾರಂಭದಲ್ಲಿ ಬಹಳ ಭರವಸೆ ಮೂಡಿಸಿದ್ದ ಧಾರಾವಾಹಿ ‘ಮಗಳು ಜಾನಕಿ’ ಕಾಲ ಕ್ರಮೇಣ ನೋಡುವ ಕುತೂಹಲವನ್ನೇ ಕಸಿದುಕೊಂಡಿದೆ. ಕಾರಣ ಧಾರಾವಾಹಿಗೆ ಅದರಲ್ಲೂ ಮೂಲ ಕಥಾವಸ್ತು ಕೈಯಿಂದ ಜಾರದಂತೆ ನಿರ್ವಹಿಸುವ ಕೊರತೆಯೆಂದು ನನ್ನ ಅಭಿಮತ. ಸಣ್ಣ ಪುಟ್ಟ ವಿಷಯಗಳನ್ನು (ಮಗನಿಂದ ಕಾಫಿಯ ಬೇಡಿಕೆ, ಸಿನಿಮಾ ಟಿಕೆಟ್ ಪ್ರಕರಣ ಇತ್ಯಾದಿ). ಶ್ಯಾಮಲಾ ಪಾತ್ರಧಾರಿ ಹಾಗೂ ಅವರ ಗಂಡನ ನಡುವೆ ನಡೆಯುವ, ಹಾಸ್ಯವೆಂದು ಬಿಂಬಿತವಾಗಿರುವ ಘಟನಾವಳಿಗಳು ತೀರಾ ಬಾಲಿಶ ಎನ್ನಬಹುದು. ಇದಕ್ಕೆಲ್ಲಕ್ಕಿಂತ ಹೆಚ್ಚಾಗಿ, ಜಾಹೀರಾತುಗಳ ಹಾವಳಿ, 30 ನಿಮಿಷ ಕಾರ್ಯಕ್ರಮದಲ್ಲಿ ಸುಮಾರು 10 ನಿಮಿಷ ಅವೇ ತಿಂದು ತೇಗುವುದರಿಂದ ಉಳಿಕೆ 20 ನಿಮಿಷಗಳಲ್ಲಿ ಈ ಅನವಶ್ಯಕ ವಿಷಯಗಳು ತೂರಿ, ಉಳಿಕೆ 10 ನಿಮಿಷಗಳಲ್ಲಿ ಹಾಗೂ ಹೀಗೂ ಮೂಲಕಥೆಗೆ ಬಂದು ಮುಟ್ಟುವ ವೇಳೆಗೆ ಕಾಲ ಮೀರಿರುತ್ತದೆ.

–ಸುಂದರ್, ಬೆಂಗಳೂರು

## ಅವೇ ಪ್ರಶಸ್ತಿ

ಕಲರ್ಸ್ ಕನ್ನಡದ ‘ಅನುಬಂಧ’ ಪ್ರಶಸ್ತಿ ಕಾರ್ಯಕ್ರಮ ವೈಭವಯುತವಾಗಿ ಅತ್ಯಂತ ಸುಂದರವಾಗಿ ಮೂಡಿ ಬಂದಿತು. ಈ ವಾಹಿನಿಯ ಧಾರಾವಾಹಿಗಳ ಎಲ್ಲಾ ನಟ– ನಟಿಯರೂ ನಿರ್ದೇಶಕರು, ತಂತ್ರಜ್ಞರನ್ನು ಒಂದೇ ವೇದಿಕೆಯಲ್ಲಿ ನೋಡಿ ಸಂತಸವಾಯಿತು. ಒಂದು ರೀತಿಯಲ್ಲಿ ಕೌಟುಂಬಿಕ ವಾತಾವರಣದಲ್ಲಿ ನಡೆದ ಈ ಸಮಾರಂಭ ಚೇತೋಹಾರಿಯಾಗಿದ್ದು ರಚಿತಾರಾಂ ನಿರೂಪಣೆ ಖ್ಯಾತನಾಮರ ಭಾಗವಹಿಸುವಿಕೆ ಕಾರ್ಯಕ್ರಮಕ್ಕೆ ವಿಶೇಷ ಮೆರುಗು ನೀಡಿ ಮುಖ್ಯಮಂತ್ರಿ ಯಡಿಯೂರಪ್ಪನವರು ಮುಖ ಬಿಗಿದುಕೊಂಡೇ ಭಾಗವಹಿಸಿದ್ದು ವಿಶೇಷವಾಗಿತ್ತು.

ಅದೇ ಧಾರಾವಾಹಿಗೆ ಮತ್ತೆ ಅದೇ ಪ್ರಶಸ್ತಿ ನೀಡುವ ಬದಲು ಬೇರೆ ಧಾರಾವಾಹಿಗಳಿಗೂ ಅವಕಾಶ ನೀಡಿದ್ದರೆ ಚೆನ್ನಾಗಿರುತ್ತಿತ್ತು. ಈ ತರಹದ ಸಮಾರಂಭಗಳು ಏಕತಾನತೆಯನ್ನು ದೂರ ಮಾಡುವಲ್ಲಿ ಸಫಲವಾಗಿದೆ.

–ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

## ನಿರ್ಧಾರ ಘನತೆಗೆ ತಕ್ಕದ್ದಲ್ಲ

ಕಲರ್ಸ್‌ನ ‘ಬಿಗ್ ಬಾಸ್’ 7ನೇ ಆವೃತ್ತಿ ಆರಂಭವಾಗಿದೆ. ಈ ರಿಯಾಲಿಟಿ ಸ್ಪರ್ಧೆಯ ಮೂಲ ಗುರಿ ಬಹುಮಾನ – ಜನಪ್ರಿಯತೆಯ ಹಿಂದೆ ಬಿದ್ದಿದೆ. ಈ ಶೋನ ವಿಶೇಷತೆ ಎಂದರೆ ಗೆಲ್ಲಬಹುದಾದ ಬಹುಮಾನದ ಹಣವನ್ನು ಉತ್ತರ ಕರ್ನಾಟಕ ನೆರೆ ಸಂತ್ರಸ್ತರಿಗೋಸ್ಕರ ಬಳಸುವ ಗುರಿಯಿಂದ ಮಠಾಧೀಶರೊಬ್ಬರು ಪಾಲ್ಗೊಂಡಿರುವುದು ಸಮಾಧಾನದ ಸಂಗತಿ. ಹಣ ಸಂಪಾದನೆಗೋಸ್ಕರ ಇಂತಹ ಸ್ಪರ್ಧೆಗಳಲ್ಲಿ ಭಾಗಿಯಾಗುವುದು ಮಠದ ಪರಂಪರೆಗೆ ಧಕ್ಕೆಯಾಗಬಹುದೇ ಎಂಬುದು ಸಾರ್ವಜನಿಕರ ಪ್ರಶ್ನೆ.

–ರಾಜೀವ್ ಎಸ್. ಮಾಗಲ್